C.R.P.67

Form No.4 (Civil)
Deposition Sheets
(R.P.No.57)

**2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್.ಸಿ. ಸಂಖ್ಯೆ: 68/2024**

ಪ್ರಾಸಾ. **02** ಚಾಸಾ. **02**

| | |
|---|---|
| ಸಾಕ್ಷಿದಾರರ ಹೆಸರು | ಮಹದೇವು |
| ತಂದೆಯ ಹೆಸರು | ಮೊಗಣ್ಣ |
| ವಯಸ್ಸು | **33** ವರ್ಷಗಳು |
| ಉದ್ಯೋಗ | ಗಾರೆ ಕೆಲಸ |
| ವಾಸ | ಹೊಸಹಳ್ಳಿ, ಮಂಡ್ಯ. |

**ಸಾಕ್ಷಿಯನ್ನು ದಿನಾಂಕ:02.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-1 ಮತ್ತು ಚಾಸಾ-3 ಗೊತ್ತು. ಸದರಿಯವರು ನನ್ನ ಸ್ನೇಹಿತರು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಗೊತ್ತಿಲ್ಲ.

2. ಸುಮಾರು 2-3 ವರ್ಷಗಳ ಹಿಂದೆ ನಾನು ಹಾಲಹಳ್ಳಿಯ 2ನೇ ಕ್ರಾಸ್ ಬಳಿ ಮಧ್ಯಪಾನ ಮಾಡಿಕೊಂಡು ಹೋಗುತ್ತಿದ್ದಾಗ ಸುಮಾರು 15-20 ಜನರ ನಡುವೆ ಗಲಾಟೆ ನಡೆಯುತ್ತಿತ್ತು. ನಾನು ನೋಡಲು ಹೋದಾಗ ನೂಕು ನುಗ್ಗಾಟದಿಂದ ನಾನುಕೆಳಗೆ ಬಿದ್ದು, ನನ್ನ ಕೈಗೆ ಪೆಟ್ಟು ಬಿದ್ದಿತ್ತು. ಆ ಸಮಯದಲ್ಲಿ ನನ್ನ ಸ್ನೇಹಿತರಾದ ಚಾಸಾ-1 ಮತ್ತು ಚಾಸಾ-3 ರವರೂ ಸಹ ಇದ್ದರು. ನನ್ನನ್ನು ಮಂಡ್ಯ ಮತ್ತು ಮೈಸೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ಯಾರೂ ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ. ಮು.ಮ.1 ನ್ನು ನೋಡುತ್ತಿದ್ದು, ಅದನ್ನು ಈ ಹಿಂದೆ ನೋಡಿರುವುದಿಲ್ಲ

ಮತ್ತು ಸದರಿ ವಸ್ತುವಿನಿಂದ ನನ್ನ ಮೇಲೆ ಹಲ್ಲೆ ಆಗಿರುವುದಿಲ್ಲ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ. ನಾನು ಬಿದ್ದು ನನಗೆ ಪೆಟ್ಟಾದಾಗ ನನ್ನ ಬಟ್ಟೆಗೆ ರಕ್ತವಾಗಿರುವುದಿಲ್ಲ. ಮುಮ.2 ನ್ನು ನೋಡುತ್ತಿದ್ದು, ಅದುನನಗೆ ಸಂಬಂಧಪಟ್ಟಿರುವುದಿಲ್ಲ. ಚಾಸಾ-1 ರವರು ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಆಸ್ಪತ್ರೆಯಲ್ಲಿ ನಾನು 4-5 ದಿನಗಳವರೆಗೆ ದಾಖಲಾಗಿದ್ದೆ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

2ನೇ ಆರೋಪಿ ಪ್ರಾಸಾ-2 ರವರ ಬಳಿ 10 ಸಾವಿರ ರೂಗಳನ್ನು ಸಾಲವಾಗಿ ಪಡೆದುಕೊಂಡಿದ್ದು, ಆತ ಕೇಳಿದರೆ ವಾಪಸ್ಸು ನೀಡದೆ ಆ ಬಗ್ಗೆ ಸಬೂಬು ನೀಡುತ್ತಿದ್ದ ಎಂದು ಚಾಸಾ-1 ನನ್ನನ್ನು ಆರೋಪಿಯ ಬಳಿ ಹಣ ಕೇಳಲು ದಿನಾಂಕಃ23.06.2023 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಹಾಲಹಳ್ಳಿ ಕೆರೆ 2ನೇ ಕ್ರಾಸ್ ನಲ್ಲಿರುವ 2ನೇ ಆರೋಪಿಯ ಮನೆ ಬಳಿ ಹೋದಾಗ 2 ಮತ್ತು 1ನೇ ಆರೋಪಿತರು ಇದ್ದು, ಆ ಸಂದರ್ಭದಲ್ಲಿ 2 ಆರೋಪಿ ಬಳಿ ಚಾಸಾ-1 ರವರು ಮತನಾಡಬೇಕು ಎಂದು ಹೋಗುತ್ತಿದ್ದಂತೆ 2ನೇ ಆರೋಪಿ ಅಲ್ಲಿಂದ ಹೋಗುತ್ತಿದ್ದ ಎಂದರೆ ಸರಿಯಲ್ಲ.

2. ಆಗ ಚಾಸಾ-1 ನಿಂತುಕೋ ಎಂದು ಹೇಳಿದಾಗ ಇಬ್ಬರು ಆರೋಪಿತರೂ ಸೇರಿ ನಮ್ಮನ್ನು ಅಡ್ಡಗಟ್ಟಿ ಸಾಲ ಕೇಳಲು ಬಂದಿದ್ದೀರಾ ಸೂಳೆಮಕ್ಕಳ ಎಂದು ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನಾನು ಹಣ ವಾಪಸ್ಸು ಕೊಡದೇ ಬೈಯುತ್ತಿದ್ದೀರಾ ಎಂದು ಕೇಳಿದಾಗ 1ನೇ ಆರೋಪಿ ಏಕಾಏಕಿ ನನಗೆ ಸಾಯಿಸುವ ಉದ್ದೇಶದಿಂದ ಆತನ ಬಳಿಯಿದ್ದ ಈಗ ತೋರಿಸಿದ ಮು.ಮ.1 ಡ್ರ್ಯಾಗನ್ ನಿಂದ ನನ್ನ ಮೇಲೆ ಹಲ್ಲೆ ಮಾಡಿ ರಕ್ತಗಾಯ ಪಡಿಸಿದನು ಎಂದರೆ ಸರಿಯಲ್ಲ. ಡ್ರ್ಯಾಗನ್ನಿಂದ ಮತ್ತೊಮ್ಮೆ ಹಲ್ಲೆ ಮಾಡಲು ಪ್ರಯತ್ನಿಸಿದಾಗ ಬಲಗೈಗೆ ಹೊಡೆದನು ಎಂದರೆ ಸರಿಯಲ್ಲ.

**3.** ನಂತರ **2** ನೇ ಆರೋಪಿ ಮು.ಮ.**1** ರಿಂದ ನನ್ನ ಎಡತೋಳಿನ ಮೇಲೆ ಹೊಡೆದು ರಕ್ತಗಾಯಪಡಿಸಿದನು ಎಂದರೆ ಸರಿಯಲ್ಲ. ಆಗ ಚಾಸಾ-**1** ಮತ್ತು ಚಾಸಾ-**3** ರವರು ಸೇರಿ ಜಗಳ ಬಿಡಿಸಿದಾಗ ಆರೋಪಿತರು ನಮಗೆ ದಮ್ಕಿ ಹಾಕಿ ಡ್ರ್ಯಾಗನ್ ಸಮೇತ ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ನನ್ನನ್ನು ಚಾಸಾ-**1** ಮತ್ತು ಚಾಸಾ-**3** ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ದಿಃ**24.06.2023** ರಂದು ಮಧ್ಯಾಹ್ನ ಘಟನೆ ನಡೆದಿದ್ದ ಬಗ್ಗೆ ಚಾಸಾ-**1** ರವರು ಪೊಲೀಸ್ ಠಾಣೆಗೆ ಹೋಗಿ ನಿಪಿ-**1** ರಂತೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

**4.** ನಂತರ ನಾನು ಆಸ್ಪತ್ರೆಯಲ್ಲಿದ್ದಾಗ ಮು.ಮ.**2** ನ್ನು ಚಾಸಾ-**1** ರವರಿಗೆ ನೀಡಿದ್ದನ್ನು ಸದರಿಯವರು ಪೊಲೀಸರಿಗೆ ನೀಡಿದ್ದ ಮೇರೆಗೆ ಅಮಾನತ್ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿದ ವಿಚಾರವನ್ನು ನಾನೇ ಸ್ವತಃ ಪೊಲೀಸರ ಮುಂದೆ ಹೇಳಿದ ಪ್ರಕಾರ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಹೇಳಿಕೆಯನ್ನು ನಿಪಿ-**7** ಎಂದು ಗುರುತಿಸಲಾಯಿತು.

**5.** ಆ ರೀತಿ ಹಣದ ವಿಚಾರವಾಗಿ ಆರೋಪಿ ಹಾಗೂ ನಮ್ಮ ಮಧ್ಯೆ ಘಟನೆ ನಡೆದ್ದಿದರೂ ಸಹ ಹಾಗೂ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿ ರಕ್ತಗಾಯ ಪಡಿಸಿದ್ದರೂ ಸಹ ಆರೋಪಿ ತರು ನನ್ನ ಸ್ನೇಹಿತರಾದ ಕಾರಣ ಅವರ ಜೊತೆ ರಾಜೀ ಮಾಡಿಕೊಂಡು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿತರ ಪರ ಶ್ರೀ ಜೆ.ಪಿ. ವಕೀಲರಿಂದಃ</u>

ಆರೋಪಿತರ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

**2** ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.